**<u>ಸಾಕ್ಷಿಯನ್ನು ದಿನಾಂಕ 24-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಂ.ಡಿ.ಕೆ ವಕೀಲರಿಂದಃ</u>**

1. ವಾದಿಯ ಗಂಡ ಸತೀಶ್ ಏನು ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಅವರು ಕೆ.ಎಂ.ಎಫ್ ಡೈರಿಗೆ ಬಾಡಿಗೆ ವಾಹನದ ಮೂಲಕ ಕೋಳಿ ಆಹಾರ ಸರಬರಾಜು ಮಾಡುತ್ತಿದ್ದರು ಎನ್ನುತ್ತಾರೆ. ಅವರು ಆರ್ಥಿಕವಾಗಿ ಚೆನ್ನಾಗಿದ್ದರು ಎಂದರೆ ಸರಿ. ಅವರು ನನಗೆ 10–15 ವರ್ಷದಿಂದ ಪರಿಚಯವಿದ್ದರು.

2. ಚೀಟಿ ವ್ಯವಹಾರದ ಸಂಬಂಧ ನಾನು ಸತೀಶ್ ರವರಿಗೆ ಕೊಟ್ಟಿದ್ದ ಚೆಕ್ ನ್ನು ಅವರ ಮರಣ ನಂತರ ವಾದಿ ವಾಪಸ್ಸು ಕೊಡಲು ನಿರಾಕರಿಸಿದರು ಎಂದು ಹಾಗೂ ಅವರ ವಿರುದ್ದ ಕ್ರಮ ಜರುಗಿಸುವಂತೆ ನಾನು ಅವರ ವಿರುದ್ದ ಪೊಲೀಸರಿಗೆ ದೂರು ಕೊಟ್ಟಿಲ್ಲ. ಆ ಸಂಬಂಧ ನ್ಯಾಯಾಲಯಕ್ಕೆ ದಾವೆ ಹಾಕಿಲ್ಲ.

3. ದಿನಾಂಕ 31.12.2022 ರಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸತೀಶ್ ರವರು ದಾಖಲಾಗಿದ್ದಾಗ ಪ್ರತಿವಾದಿ ಅವರಿಗೆ ರೂ.50 ಸಾವಿರ ನಗದು ಹಣ ಕೊಟ್ಟರು ಎನ್ನಲಾದ ಸಂದರ್ಭದಲ್ಲಿ ನಾನು ಹಾಜರಿರಲಿಲ್ಲ. ಸದರಿ ವಿಷಯವನ್ನು ನನಗೆ ಪ್ರತಿವಾದಿ ಹೇಳಿದ್ದಾರೆ ಎಂದರೆ ಸರಿ. ಪ್ರತಿವಾದಿ ಯಾವುದೇ ಹಣವನ್ನು ಆಸ್ಪತ್ರೆಯಲ್ಲಿ ಕೊಟ್ಟಿಲ್ಲ ಮತ್ತು ಅವರ ಮಾತು

ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಚೀಟಿ ವ್ಯವಹಾರದಲ್ಲಿ ಯಾರ್ಯಾರು ಎಷ್ಟು ಹಣ ತೊಡಗಿಸಿದ್ದರು ಮತ್ತು ಎಷ್ಟು ಕಮಿಷನ್ ಪಡೆದರು ಎಂಬ ಬಗ್ಗೆ ನಾನು ಬರೆದಿಟ್ಟುಕೊಂಡಿಲ್ಲ. ವಾದಿಯ ಗಂಡ ಚೀಟಿ ವ್ಯವಹಾರ ನಡೆಸುತ್ತಿರಲಿಲ್ಲ ಅಥವಾ ನಾನು ಅದರಲ್ಲಿ ಸದಸ್ಯನಾಗಿರಲಿಲ್ಲ ಮತ್ತು ಯಾವುದೇ ಖಾಲಿ ಚೆಕ್ ನ್ನು ಅವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗೆ ಷರೀಕ್ಕಾಗಿ ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕಮಿಷನ್ ಹಣ ವಾಪಸ್ಸು ಕೊಡುವುದಾಗಿ ಮತ್ತು ತಾನು ಕಟ್ಟಿದ್ದ ರೂ.3 ಲಕ್ಷ ಚೀಟಿ ಹಣ ವಾಪಸ್ಸು ಕೊಡುವಂತೆ ವಾದಿಗೆ ಕೇಳಿದರು ಮತ್ತು ಆಗ ವಾದಿ ಚೀಟಿ ವ್ಯವಹಾರವನ್ನು ನಿರಾಕರಿಸಿ ರೂ.4 ಲಕ್ಷ ಸಾಲ ಮರುಪಾವತಿ ಮಾಡುವಂತೆ ಪ್ರತಿವಾದಿಗೆ ಹೇಳಿದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

5. ಖಾಲಿ ಚೆಕ್ ನ್ನು ದುರ್ಬಳಕೆ ಮಾಡಿಕೊಂಡು ವಾದಿ ಇಲ್ಲಿಯವರೆಗೆ ನನ್ನ ವಿರುದ್ಧ ಯಾವುದೇ ದಾವೆ ಅಥವಾ ಪ್ರಕರಣ ದಾಖಲಿಸಿಲ್ಲ. ವಾದಿ ಅಥವಾ ಆಕೆಯ ಗಂಡನಿಗೆ ಯಾವುದೇ ಚೆಕ್ ಕೊಟ್ಟಿಲ್ಲ ಹಾಗಾಗಿ ನನ್ನ ವಿರುದ್ಧ ಕ್ರಮಕೈಗೊಳ್ಳುವ ಸಂದರ್ಭದಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ಚೀಟಿ ವ್ಯವಹಾರದಲ್ಲಿ ನನ್ನನ್ನು ಸೇರಿದಂತೆ ಹಲವರಿಂದ ಖಾಲಿ ಚೆಕ್ ಪಡೆದುಕೊಂಡಿದ್ದರು ಹಾಗೂ ಸದರಿ ಚೆಕ್ ಗಳನ್ನು ಇಟ್ಟುಕೊಂಡು ವಾದಿ ಸುಳ್ಳು ಪ್ರಕರಣಗಳನ್ನು ದಾಖಲಿಸುವುದಾಗಿ ಬೆದರಿಸುತ್ತಿದಾರ್ೆ ಎಂದು ನಾನು ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

6. ವಾದಿ–ಪ್ರತಿವಾದಿಯರ ನಡುವಿನ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಯ ಮಾತು ಕೇಳಿ ಚೀಟಿ ವ್ಯವಹಾರಕ್ಕೆ ಅವರು ವಾದಿಯ ಗಂಡನಿಗೆ ಖಾಲಿ ಚೆಕ್ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಮತ್ತು ಅವರು ಮೃತ ಪಟ್ಟಿರುವ ಸಂಗತಿಯನ್ನು ದುರ್ಬಳಕೆ ಮಾಡಿಕೊಂಡು ನಾನು ಮತ್ತು ಪ್ರತಿವಾದಿ ಸುಳ್ಳು ಕಥೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**